ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಶಾಖೆ / ವಿಷಯ: DEPARTMENT / SUBJECT: ಬಜೆಟ್ (ಕೇಂ.ಪ್ರ.)

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ  ದಿನಾಂಕ : DATE : 06/07/2019

# ಸರಳ ಮಹಿಳೆಯ ಸಮಗ್ರ ಆಯವ್ಯಯ

06/7/19

**ಮುಂದಿನ ಹತ್ತು ವರ್ಷಗಳನ್ನು ಗಮನದಲ್ಲಿಟ್ಟುಕೊಂಡು ಈ ಬಜೆಟ್ ಸಿದ್ಧಪಡಿಸಲಾಗಿದೆ ಎಂದ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್, ಭಾರತವನ್ನು 5 ಲಕ್ಷ ಕೋಟಿ ಡಾಲರ್ ಆರ್ಥಿಕತೆಯಾಗಿ ರೂಪಿಸುವ ಮುನ್ನೋಟವನ್ನು ಸದನದ ಮುಂದಿಟ್ಟರು.**



ಬಜೆಟ್ ರೂವಾರಿಗಳು... ಬಜೆಟ್ ಮಂಡನೆಗೆ ಮುನ್ನ ಸಂಸತ್ ಭವನದ ಎದುರು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ರಾಜ್ಯ ಸಚಿವ ಅನುರಾಗ್ ಠಾಕೂರ್ ಹಾಗೂ ಹಣಕಾಸು ಸಚಿವಾಲಯದ ಹಿರಿಯ ಅಧಿಕಾರಿಗಳ ಗ್ರೂಪ್ ಫೋಟೋ:.

ರಾಷ್ಟ್ರಲಾಂಛನ ಹೊಂದಿರುವ ಕೆಂಪು ಬಟ್ಟೆಯಲ್ಲಿ ಸುತ್ತಿ ತಂದ ಬಜೆಟ್ ಕಡತಗಳು, ಭಾಷಣದ ನಡುನಡುವೆ ಬಸವಣ್ಣನೂ ಸೇರಿದಂತೆ ಕವಿಗಳ ಸೂಕ್ತಿಗಳು, ಮಾತಿನ ವೈಖರಿಗೆ ತಕ್ಕ ಹಾವ-ಭಾವ ಹಾಗೂ ಆತ್ಮವಿಶ್ವಾಸಗಳೊಂದಿಗೆ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು 2019-20ನೇ ಸಾಲಿನ ಆಯವ್ಯಯವನ್ನು ಸಂಸತ್ತಿನಲ್ಲಿ ಶುಕ್ರವಾರ ಮಂಡಿಸಿದರು. ಇದರೊಂದಿಗೆ ಬಜೆಟ್ ಮಂಡಿಸಿದ ಎರಡನೇ ಮಹಿಳೆ, ಮೊದಲ ಪೂರ್ಣ ಪ್ರಮಾಣದ ಮಹಿಳಾ ವಿತ್ತ ಸಚಿವೆ ಎಂಬ ಇತಿಹಾಸ ಸೃಷ್ಟಿಸಿದರು. (ಪ್ರಧಾನಿಯಾಗಿದ್ದ ಇಂದಿರಾ ಗಾಂಧಿ 1970ರಲ್ಲಿ ಬಜೆಟ್ ಮಂಡಿಸಿದ್ದರು.) ಎರಡೂಕಾಲು ಗಂಟೆಗಳ ಕಾಲ ನಿರ್ಮಲಾ ಮಾಡಿದ ಬಜೆಟ್ ಭಾಷಣ, ದೀರ್ಘ ಆಯವ್ಯಯ ಮಂಡನೆಗಳಲ್ಲಿ ಒಂದು ಎನಿಸಿತು.

ಗುಲಾಬಿ ವರ್ಣದ ಸೀರೆ ಹಾಗೂ ರವಿಕೆ ತೊಟ್ಟ ನಿರ್ಮಲಾ, ನಿಗದಿತ ಸಮಯಕ್ಕಿಂತ ಮೊದಲೇ 10.55 ಗಂಟೆಗೆ ಸಹಾಯಕ ಸಚಿವ ಅನುರಾಗ್ ಠಾಕೂರ್, ಇಲಾಖೆಯ ಅಧಿಕಾರಿಗಳು ಮತ್ತು ಸಹಾಯಕರ ಜೊತೆಗೆ ಲೋಕಸಭೆಗೆ ಆಗಮಿಸಿದರು. ಇದಕ್ಕೂ ಮುನ್ನ ಅವರು ಸಂಪ್ರದಾಯದಂತೆ ರಾಷ್ಟ್ರಪತಿ ಭವನಕ್ಕೆ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರನ್ನು ಭೇಟಿ ಮಾಡಿದರು. ಲೋಕಸಭೆಯಲ್ಲಿ ಅವರು ಆಸೀನರಾಗುತ್ತಿದ್ದಂತೆ ಹಲವಾರು ಮಹಿಳಾ ಸಂಸದರು ಅವರ ಬಳಿಗೆ ತೆರಳಿ ಶುಭ ಕೋರಿದರು. ಆತ್ಮವಿಶ್ವಾಸಪೂರ್ವಕವಾಗಿ ಅವರು ಬಜೆಟ್ ಮಂಡನೆ ಭಾಷಣವನ್ನು ಮಂಡಿಸುತ್ತಿದ್ದ ವೇಳೆ, ಪ್ರಧಾನಿ ಮೋದಿ ಸೇರಿದಂತೆ ಆಡಳಿತ ಪಕ್ಷದ ಸದಸ್ಯರು ಉತ್ಸಾಹದಿಂದ ಮೇಜುಗಳನ್ನು ಕುಟ್ಟಿ ಶ್ಲಾಘನೆ ಸಲ್ಲಿಸುತ್ತಿದ್ದುದು ಕಂಡುಬಂತು. ತಮಿಳುನಾಡಿನಲ್ಲಿ ಹುಟ್ಟಿ ಬೆಳೆದ ನಿರ್ಮಲಾ, ಕರ್ನಾಟಕದಿಂದ ಸಂಸತ್ತಿಗೆ ಆಯ್ಕೆಯಾಗಿದ್ದು ಬಜೆಟ್ ಭಾಷಣವನ್ನು ಹಿಂದಿಯಲ್ಲಿ ಮಂಡಿಸಿದರು.

ಮುಂದಿನ ಹತ್ತು ವರ್ಷಗಳನ್ನು ಗಮನದಲ್ಲಿಟ್ಟುಕೊಂಡು ಈ ಬಜೆಟ್ ಸಿದ್ಧಪಡಿಸಲಾಗಿದೆ ಎಂದ ನಿರ್ಮಲಾ, ಭಾರತವನ್ನು 5 ಟ್ರಿಲಿಯನ್ ಆರ್ಥಿಕತೆಯಾಗಿ ರೂಪಿಸುವ ಮುನ್ನೋಟವನ್ನು ಸದನದ ಮುಂದಿಟ್ಟರು. ಅವರ ಬಜೆಟ್ ಮಂಡನೆಯ ವೈಖರಿಗೆ ಮನಸೋತ ಸ್ಪೀಕರ್ ಓಮ್ ಬಿರ್ಲಾ ಹಾಗೂ ಪ್ರಧಾನಿ ಮೋದಿ, ನಿರ್ಮಲಾರನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದು ವಿಶೇಷವಾಗಿತ್ತು. 2 ಗಂಟೆ 17 ನಿಮಿಷಗಳ ಭಾಷಣದ ಸಂದರ್ಭದಲ್ಲಿ ನಡುವೆ ಎಲ್ಲಿಯೂ ನಿರ್ಮಲಾ ನೀರು ಕುಡಿಯುವುದಕ್ಕೆ ಸಹ ವಿರಾಮ ತೆಗೆದುಕೊಳ್ಳಲಿಲ್ಲ.

ಭಾಷಣದ ಸಂದರ್ಭದಲ್ಲಿ ನಿರ್ಮಲಾ ಅವರು ತಮ್ಮ ತಂದೆ-ತಾಯಿಗೆ ಕೃತಜ್ಞತೆ ಅರ್ಪಿಸಿದರು. ತಂದೆ ನಾರಾಯಣನ್ ಸೀತಾರಾಮನ್ ಹಾಗೂ ತಾಯಿ ಸಾವಿತ್ರಿ ಸೀತಾರಾಮನ್ ಅವರು ಮಗಳ ಬಜೆಟ್ ಭಾಷಣ ಆಲಿಸಲು ಪ್ರತ್ಯೇಕ ಕಾರಿನಲ್ಲಿ ಸಂಸತ್ತಿಗೆ ಬಂದು ಆಸೀನರಾಗಿದ್ದರು. ಭಾಷಣದಲ್ಲಿ ಗ್ಯಾಲರಿಯಲ್ಲಿದ್ದ ತಮ್ಮ ಮಗಳು, ಪತ್ರಕರ್ತೆ ವಾಙ್ಮಯಿ ಪರ್ಕಲಾ ಅವರನ್ನೂ ನಿರ್ಮಲಾ ನೆನೆದರು.

ರಾಜ್ಯಸಭೆಗೆ ಮೀಸಲಾಗಿದ್ದ ಗ್ಯಾಲರಿ ಸಂಪೂರ್ಣ ಭರ್ತಿಯಾಗಿತ್ತು. ವಿಸಿಟರ್ಸ್ ಗ್ಯಾಲರಿಯಲ್ಲಿ ಹಲವಾರು ವಿದೇಶಿಗರೂ ಕಂಡುಬಂದರು. ಗ್ರಾಮೀಣ ಕಲಾಕಾರರ ಬಗ್ಗೆ ನಿರ್ಮಲಾ ಪ್ರಸ್ತಾಪಿಸುತ್ತಿದ್ದಾಗ ಹೆಚ್ಚಿನ ಕರತಾಡನ ಆಡಳಿತ ಪಕ್ಷದಿಂದ ಕೇಳಿಬಂತು.

## ಮೊದಲ ವಿತ್ತ ಸಚಿವೆಯ ದೂರದೃಷ್ಟಿ

ದೇಶದ ಮೊತ್ತಮೊದಲ ಮಹಿಳಾ ವಿತ್ತ ಸಚಿವರಾಗಿರುವ ನಿರ್ಮಲಾ ಸೀತಾರಾಮನ್, ಮೊತ್ತ ಮೊದಲ ಮಹಿಳಾ ರಕ್ಷಣಾ ಸಚಿವರಾಗಿಯೂ ಇತಿಹಾಸ ಸೃಷ್ಟಿಸಿದವರು. ತಮಿಳುನಾಡಿನ ಮದುರೈನಲ್ಲಿ ಜನಿಸಿದ ಅವರು ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆ ಆಗಿದ್ದಾರೆ. ಬಿಜೆಪಿಯ ಪ್ರಾಥಮಿಕ ಸದಸ್ಯರಾಗಿ ಸೇರಿಕೊಂಡ ಒಂದೇ ದಶಕದಲ್ಲಿ ವಿತ್ತ ಸಚಿವರಾಗುವವರೆಗೆ ಬೆಳೆದಿದ್ದಾರೆ. ಮೊದಲ ಸಲವೇ ಸಾಕಷ್ಟು ದೂರದೃಷ್ಟಿಯ ಬಜೆಟ್ ಮಂಡಿಸಿ ಸೈ ಎನಿಸಿಕೊಂಡಿದ್ದಾರೆ. ತಿರುಚಿನಾಪಳ್ಳಿಯಲ್ಲಿ ಬಿಎ ಪದವಿ ಪಡೆದು, ನಂತರ ದಿಲ್ಲಿಯ ಜವಾಹರಲಾಲ್ ನೆಹರೂ ಯೂನಿವರ್ಸಿಟಿ ಮತ್ತು ಲಂಡನ್ ಸ್ಕೂಲ್ ಆಫ್ ಎಕಾನಮಿಕ್ಸ್‌ಗಳಲ್ಲಿ ಅರ್ಥಶಾಸ್ತ್ರ ಅಧ್ಯಯನ ಮಾಡಿದರು. ಲಂಡನ್‌ನಲ್ಲಿ ಸೇಲ್ಸ್‌ಪರ್ಸನ್ ಆಗಿಯೂ ಅನುಭವ ಪಡೆದರು. ಲಂಡನ್‌ನಲ್ಲಿ ಪ್ರೈಸ್ ವಾಟರ್‌ಹೌಸ್ ಕೂಪರ್ ಸಂಸ್ಥೆಯಲ್ಲಿ ಆರ್ಥಿಕ ವ್ಯವಹಾರಗಳ ಅಧಿಕಾರಿಯಾಗಿ ಬಹು ಕಾಲ ಕಾರ್ಯ ನಿರ್ವಹಿಸಿದರು. ಇತರ ಕೆಲವು ಅಂತಾರಾಷ್ಟ್ರೀಯ ಸಂಸ್ಥೆಗಳಲ್ಲಿ ಲೆಕ್ಕತಜ್ಞೆಯಾಗಿಯೂ ಕೆಲಸ ಮಾಡಿದರು.

ಕಳೆದ ಹಣಕಾಸು ವರ್ಷದಲ್ಲಿ ಕುಸಿದ ಜಿಡಿಪಿ ಬೆಳವಣಿಗೆ, ಮಾರುಕಟ್ಟೆಯಲ್ಲಿ ಹೆಚ್ಚುತ್ತಿರುವ ಹಣಕಾಸಿನ ಬೇಡಿಕೆ, ಹೂಡಿಕೆಯ ಕೊರತೆ, 45 ವರ್ಷಗಳಲ್ಲೇ ಕನಿಷ್ಠಗತಿಯಲ್ಲಿರುವ ಉದ್ಯೋಗ ಮಾರುಕಟ್ಟೆ, ಬ್ಯಾಂಕೇತರ ಹಣಕಾಸು ಸಂಸ್ಥೆಗಳ ವಿಶ್ವಾಸಾರ್ಹತೆ ಕುಸಿತ, ಚುನಾವಣೆ ಸಂದರ್ಭದಲ್ಲಿ ನೀಡಿದ ಭರವಸೆಗಳಿಗಾಗಿ ಕಲ್ಪಿಸಲಾದ ಯೋಜನೆಗಳಿಗೆ ಹಣ ಹೊಂಚುವಿಕೆ- ಮುಂತಾದ ಸವಾಲುಗಳು ನಿರ್ಮಲಾ ಅವರ ಎದುರಿಗಿದ್ದವು. ಅವನ್ನೆಲ್ಲ ಜಾಣ್ಮೆಯಿಂದ ನಿಭಾಯಿಸಿದ್ದಾರೆ.